**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 12.06.2026**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ಈಗ್ಗೆ 10–15 ವರ್ಷಗಳಿಂದ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುವ ವಿಳಾಸದಲ್ಲಿ ನಾನು ವಾಸ ಇದ್ದೇನೆ. ಈ ಹಿಂದೆ ನಿಮ್ಮ ಪಾಟೀ ಸವಾಲು ಪೂರ್ಣವಾಗಿ ಮುಗಿದಿತ್ತು ಎಂದರೆ ಸರಿ. ನಿಡಿ.4 ಕ್ಕೆ ಸಂಬಂಧಿಸಿದ ದೂರಿನ ಪ್ರತಿ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಅದು ಕಳೆದು ಹೋಗಿದೆ ಅದಕ್ಕೆ ಕೊಟ್ಟಿಲ್ಲವೆಂದು ಹೇಳುತ್ತಾರೆ. ಸಾಕ್ಷಿ ನಂತರ ಕೊಡುತ್ತೇನೆಂದು ಹೇಳುತ್ತಾರೆ. ದಿಃ 23.03.2026 ರಲ್ಲಿ ಆ ದಾಖಲೆ ಕಳೆದು ಹೋಗಿದೆ ನನ್ನ ಗಮನಕ್ಕೆ ಬಂತು. ಮೂಲ ಕ್ರಯಪತ್ರ ನಿಮ್ಮ ಬಳಿ ಇದೆ ಎಂದರೆ ಸರಿಯಲ್ಲ. ಆ ಮೂಲ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಹಾಜರು ಪಡಿಸದೇ ಮುಚ್ಚಿಟ್ಟಿರುತ್ತೀರಾ ಎಂದರೆ ಸರಿಯಲ್ಲ. ಪೊಲೀಸರನ್ನು ಷಾಮೀಲು ಮಾಡಿಕೊಂಡು ಸುಳ್ಳು ದೂರು ಕೊಟ್ಟು ಸುಳ್ಳು ಹಿಂಬರಹ ತಂದಿರುತ್ತೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.**

**ಓ ಹೇ ಕೇ ಸ ಇ ಒ**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**